ಎಂದು ಪತ್ರಿಕೆಗಳಲ್ಲೂ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ನಿಮ್ಮ ಇಲಾಖೆ ಯಾವುದಾದರೂ ಸ್ಪಷ್ಟವಾದ ಕ್ರಮವನ್ನು ಕೈಗೊಂಡಿದೆಯೇ ಎನ್ನುವುದನ್ನು ಸ್ಪಷ್ಟ ಮಾಡಬೇಕು.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ : ಮಾನ್ಯ ಅಧ್ಯಕ್ಷರೆ, ಕಾರ್ಖಾನೆಗಳ ಮೇಲೆ ಕ್ರಮ ತೆಗೆದುಕೊಂಡಿರುವ ಮಾಹಿತಿಗಳು ಸದ್ಯಕ್ಕೆ ನನ್ನ ಹತ್ತಿರವಿಲ್ಲ, ನಂತರ ಅವರಿಗೆ ಮಾಹಿತಿಯನ್ನು ತಲುಪಿಸುತ್ತೇನೆ. ಹಾಗೆ ಮಹಿಳಾ ಕಾರ್ಮಿಕರಿಗೆ ಏನೇನು ಶೋಷಣೆಯಾಗುತ್ತಿದೆ, ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಅವರು ಕೇಳಿದ್ದಾರೆ. ಈಗಾಗಲೇ ನಾನು 2–3 ಸುತ್ತಿನ ಸಭೆಯನ್ನು ಮಾಡಿ, ನಮ್ಮ ಶ್ರೀಮತಿ ತಾರಾ, ಜಯಮಾಲ, ಮೋಟಮ್ಮನವರು ಇವರೆಲ್ಲಾ ವಿಧಾನಪರಿಷತ್ತಿನಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅವರನ್ನು ಕರೆದು ಸಭೆಯನ್ನು ಮಾಡಿ ಸಂಬಂಧಪಟ್ಟ ಮಾಲೀಕರಿಗೆ ಸೂಕ್ತ ನಿರ್ದೇಶನವನ್ನು ಕೊಡುವ ಕೆಲಸವನ್ನು ಮಾಡಿದ್ದೇವೆ.

ಅಧ್ಯಕ್ಷರು : ಅವರು ಕೇಳಿರುವ ಪ್ರಶ್ನೆಗೆ ನಿಮ್ಮಲ್ಲಿ ಮಾಹಿತಿ ಇದ್ದರೆ ಅವರಿಗೆ ಕಳುಹಿಸಿ ಕೊಡಿ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ : ಅಧ್ಯಕ್ಷರೆ, ಆಯಿತು.

ಅಧ್ಯಕ್ಷರು : ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್, ಇಲ್ಲ. ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್, ಇಲ್ಲ,

12. **ವಿಷಯ :** **ತಾಳೆ ಬೆಳೆಗಾರರು ಸಂಕಷ್ಟಕ್ಕೀಡಾಗಿರುವುದರಿಂದ, ಸರ್ಕಾರವು ತಾಳೆ ಬೆಳೆಗೆ ಬೆಂಬಲ ಬೆಲೆ ಘೋಷಣೆ ಮಾಡುವ ಕುರಿತು.**

ಶ್ರೀ ವಿಶ್ವನಾಥ್ ಈ ಪಾಟೀಲ್ : ಮಾನ್ಯ ಅಧ್ಯಕ್ಷರೆ, ರೈತರ ಮುಖ್ಯ ಬೆಳೆಯಾದ ತಾಳೆಬೆಳೆಗೆ ಕಳೆದ ಸಾಲಿನಲ್ಲಿ ಸರ್ಕಾರವು ರೂ. 8500/–ಗಳ ಬೆಂಬಲ ಬೆಲೆ ಘೋಷಣೆ ಮಾಡಿ ಬೆಳೆಯನ್ನು ಖರೀದಿಸಲಾಗುತ್ತಿದ್ದು, ಆದರೆ, ಈ ಸಾಲಿನಲ್ಲಿ ಕೇವಲ ರೂ. 5000/– ರಿಂದ ರೂ. 6000/–ಕ್ಕೆ ಮಾರಾಟ ಮಾಡುತ್ತಿರುವುದರಿಂದ, ರೈತರು ಬೆಳೆಗೆ ಬೆಲೆ ಇಲ್ಲದಂತಾಗಿ, ತಾಳೆ ಬೆಳೆಗಾರರು ಸಂಕಷ್ಟಕ್ಕೀಡಾಗಿರುವುದರಿಂದ, ಸರ್ಕಾರವು ತಾಳೆ ಬೆಳೆಗೆ ಬೆಂಬಲ ಬೆಲೆ ರೂ. 15,000/–ಗಳಿಗೆ ಘೋಷಣೆ ಮಾಡುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು) :

ಡಾ॥ ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿನಲ್ಲಿ ತಾಳೆ ಬೆಳೆಗೆ ಪ್ರತಿ ಟನ್‌ಗೆ ರೂ. 8500/– ರೂಪಾಯಿಗಳ ಬೆಂಬಲ ಬೆಲೆ ಘೋಷಣೆ ಮಾಡಿದ್ದುದು ನಿಜ ಮತ್ತು ಅದರಂತೆ ರೈತರಿಗೆ ಹಣ ಪಾವತಿಸಲಾಗಿರುತ್ತದೆ.

2014–15ನೇ ಸಾಲಿನಲ್ಲಿಯೂ ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕೆಂದು ರಾಜ್ಯದ ತಾಳೆ ಬೆಳೆಗಾರರು ಒತ್ತಾಯಿಸುತ್ತಿದ್ದಾರೆ. 2014–15ನೇ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ರೈತರಿಗೆ ಮಾಹೆವಾರು ಪ್ರತಿ ಟನ್‌ಗೆ ದೊರೆತಿರುವ ಬೆಲೆಯು ಕೆಳಕಂಡಂತಿರುತ್ತದೆ.

ಮಾಹೆ	ಪ್ರತಿ ಟನ್ನಿನ ತಾಳೆ ಹಣ್ಣಿನ ಬೆಲೆ (ರೂ.ಗಳಲ್ಲಿ)
Apr-14	7707
May-14	7389
Jun-14	6971
Jul-14	6935
Aug-14	6547
Sep-14	5916
Oct-14	6079
Nov-14	6040

ಇದನ್ನು ಪರಿಶೀಲಿಸಿದಾಗ, ಏಪ್ರಿಲ್ ಯಿಂದ ನವೆಂಬರ್ ವರೆಗೆ ಪ್ರತಿ ಟನ್‌ಗೆ ಸರಾಸರಿ ರೂ. 6,698/– ರೂಪಾಯಿಗಳು ರೈತರಿಗೆ ದೊರೆಕಿರುತ್ತದೆ. ಬೆಂಬಲ ಬೆಲೆ ನೀಡಬೇಕೆಂಬ ರೈತರ ಬೇಡಿಕೆ ಬಗ್ಗೆ ಪರಿಶೀಲಿಸಲು ತೋಟಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ, ಕೃಷಿ ಮಾರುಕಟ್ಟೆ ಇಲಾಖಾ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಬೆಂಗಳೂರು ರವರನ್ನು ಒಳಗೊಂಡಂತೆ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ರೈತರ ಬೇಡಿಕೆಗಳ ಬಗ್ಗೆ ಎಲ್ಲಾ ಅಂಶಗಳನ್ನು ಪರಿಶೀಲಿಸುತ್ತಿದ್ದು, ಸದ್ಯದಲ್ಲೇ ವರದಿ ಪಡೆಯಲಾಗುವುದು. ಸಮಿತಿಯ ವರದಿ ಪಡೆದ ನಂತರ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು.

ಶ್ರೀ ವಿಶ್ವನಾಥ್ ಈ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹೋದ ಸಲ ರೂ. 8,500 ಬೆಂಬಲ ಬೆಲೆ ಎಂದು ಘೋಷಣೆ ಮಾಡಿದ್ದರು, ಪ್ರತಿ ವರ್ಷ ರೈತರು ಏತಕ್ಕೆ ಕೇಳಬೇಕು ? ಪ್ರತಿ ವರ್ಷ ರೈತರು ಕೇಳುವುದಕ್ಕಿಂತ ರೂ. 15,000 ಎಂದು ನಿಗದಿ ಮಾಡಿ. ಬಹಳ ಜನ ರೈತರು ಈ ತಾಳೆ ಬೆಳೆಯನ್ನು ಬೆಳೆಯುತ್ತಿದ್ದಾರೆ, ಅದಕ್ಕೆ ಬರೀ ರೂ. 6,000 ಬೆಂಬಲ ಬೆಲೆ ಇರುವುದರಿಂದ ಬಹಳ ನಷ್ಟವಾಗುತ್ತಿದೆ, ಬಹಳ ಜನ ಆ ಗಿಡಗಳನ್ನು ಕಿತ್ತಾಕುತ್ತಿದ್ದಾರೆ. ಆದುದರಿಂದ ಅದಕ್ಕೆ ರೂ. 15,000

ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರೆ ಅವರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ, ಹೆಚ್ಚಿನ ಜನರು ಅದನ್ನು ಬೆಳೆಯುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) : (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ. ಈಗಾಗಲೇ ರೂ. 8,500 ಬೆಂಬಲ ಬೆಲೆಯನ್ನು ಘೋಷಣೆ ಮಾಡಲಾಗಿದೆ ಈ ವರ್ಷದ ಮಾರ್ಚ್‌ನಿಂದ ನವೆಂಬರ್‌ವರೆಗಿನ ಒಂದು average ರೂ. 6,898 ಗೆ ಪ್ರತಿ ಟನ್‌ಗೆ ಮಾರಾಟವಾಗಿದೆ. ಈ ವರ್ಷವೂ ಕೂಡ ಬೆಂಬಲ ಬೆಲೆಯಲ್ಲಿ ತಾಳೆ ಹಣ್ಣನ್ನು ಖರೀದಿ ಮಾಡಲು ಅಧಿಕಾರಿಗಳ ಹಂತದಲ್ಲಿ ಒಂದು ಸಭೆ ನಡೆಯುತ್ತದೆ. ಅದಾದ ಮೇಲೆ ಇದರ ಬಗ್ಗೆ ಸಂಪುಟ ಉಪ ಸಮಿತಿಯಲ್ಲಿ ಚರ್ಚೆ ಮಾಡಿ ಸದ್ಯದಲ್ಲೆ ಹಿಂದೆ ಏನು ರೂ. 8,500 ಖರೀದಿಸಲಾಗಿತ್ತು ಆ ಬೆಲೆಯಲ್ಲಿ ಖರೀದಿ ಮಾಡಲು ಪರಿಶೀಲಿಸಲಾಗುವುದು.

13. ವಿಷಯ : ಬೀದರ್ ಜಿಲ್ಲೆಯಲ್ಲಿನ ಪಿಎಂಸಿ ಕನ್ಸೆಲ್ಟೆನ್ಸಿಯವರ ನಿರ್ಲಕ್ಷತನದಿಂದ ಕಾಮಗಾರಿ ನಿಂತಿದ್ದು ಗುತ್ತಿಗೆಯನ್ನು ರದ್ದು ಮಾಡಿ 3ನೇ ವ್ಯಕ್ತಿಯ ತಪಾಸಣೆಗೆ ಹೊಸಬರನ್ನು ನೇಮಿಸಿ ಕಾಮಗಾರಿಯನ್ನು ಮುಂದುವರೆಸುವ ಬಗ್ಗೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯ ನಗರೋತ್ಥಾನ ಹಂತ–2ರ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಗುತ್ತಿಗೆದಾರರಿಗೆ, ರೂ. 4.00 ಕೋಟಿಗಳಿಗೆ ಕಾಮಗಾರಿಯನ್ನು ನೀಡಿದ್ದಾಗ್ಯೂ ಈ ಕಾಮಗಾರಿಯ ನಿರ್ವಹಣೆ ಸಲಹೆಗಾರರಾದ ಪಿ.ಎಂ.ಸಿ. ಕನ್ಸೆಲ್ಟೆನ್ಸಿಯವರ ನಿರ್ಲಕ್ಷತನದಿಂದ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಪಿ.ಎಂ.ಸಿ. ಕನ್ಸೆಲ್ಟೆನ್ಸಿ ಗುತ್ತಿಗೆಯನ್ನು ರದ್ದು ಮಾಡಿ ಮೂರನೇ ವ್ಯಕ್ತಿಯ ತಪಾಸಣೆಗೆ ಹೊಸಬರನ್ನು ನೇಮಿಸಿ ಕಾಮಗಾರಿಯನ್ನು ಮುಂದುವರೆಸುವ ಬಗ್ಗೆ ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುತ್ತೇನೆ.

ಶ್ರೀ ಖಮರುಲ್ ಇಸ್ಲಾಂ (ವಕ್ಫ್ ಸಚಿವರು) : ಮಾನ್ಯ ಅಧ್ಯಕ್ಷರೆ, ಸಚಿವ ಸಂಪುಟದ ಅನುಮೋದನೆ ಪಡೆದು ನಗರೋತ್ಥಾನ 2ನೇ ಹಂತದ ಯೋಜನೆಯ ಮಾರ್ಗಸೂಚಿಗಳನ್ನು ಸರ್ಕಾರವು ಹೊರಡಿಸಿರುತ್ತದೆ. ಈ ಮಾರ್ಗಸೂಚಿಗಳ ಅನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಗರೋತ್ಥಾನ ಎರಡನೇ ಹಂತದ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾವಾರು ಯೋಜನಾ ಸಮಾಲೋಚಕರನ್ನು ಪೌರಾಡಳಿತ ನಿರ್ದೇಶನಾಲಯದಿಂದ ಟೆಂಡರ್ ಕರೆದು ನೇಮಿಸಲಾಗಿರುತ್ತದೆ. ಅದರಂತೆ ಬೀದರ್ ಜಿಲ್ಲೆಗೆ M/s. Aakar Abhinav Consultant Pvt. Ltd., Navi Mumbai ರವರನ್ನು ಯೋಜನಾ ಸಮಾಲೋಚಕರಾಗಿ (ಪಿ.ಎಂ.ಸಿ) ನೇಮಿಸಲು ದಿನಾಂಕ : 09–11–2012 ರಂದು ನಡೆದ ನಗರೋತ್ಥಾನ 2ನೇ ಹಂತದ ಯೋಜನೆಯ ರಾಜ್ಯ ಮಟ್ಟದ ಸಮಿತಿಯು ಅನುಮೋದನೆ